ದಿನಾಂಕ: ಫೆಬ್ರವರಿ ೧೦, ೨೦೧೪

**<u>ಮೋದಿ ಸಾರ್ವಜನಿಕ ಸಭೆಗಳು ದೇಶದ ಮನಸ್ಥಿತಿಯ ಪ್ರತಿಬಿಂಬ</u>**

–ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ನರೇಂದ್ರ ಮೋದಿ ಹಾಗೂ ಭಾಜಪಗೆ ಕಳೆದ ವಾರ ಕಿಂಚಿತ್ತು ಬಿಡುವಿಲ್ಲದ ಅವಧಿಯಾಗಿತ್ತು. ಶನಿವಾರದಂದು ಅವರು ಇಂಫಾಲ್, ಗೋಹಾಟಿ ಮತ್ತು ಅಂತಿಮವಾಗಿ ಚೆನ್ನೈನಲ್ಲಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಭಾನುವಾರ, ಚೆನ್ನೈನಲ್ಲಿ ಶೈಕ್ಷಣಿಕ ಸಂಸ್ಥೆಯೊಂದರ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಅವರು ಕೊಚ್ಚಿ ಹಾಗೂ ತಿರುವನಂತಪುರಂನಲ್ಲಿ ವಿವಿಧ ಸಮಾರಂಭಗಳಲ್ಲಿ ಪಾಲ್ಗೊಂಡಿದ್ದರು.

ನರೇಂದ್ರ ಮೋದಿ ಅವರ ಎಲ್ಲಾ ಕಾರ್ಯಕ್ರಮದಲ್ಲೂ ಸಾರ್ವಜನಿಕರು ಕಿಕ್ಕಿರಿದು ತುಂಬಿರುವ ದೃಶ್ಯ ಒಂದು ನಿರ್ಣಾಯಕ ಗಳಿಗೆಯಾಗಿತ್ತು. ಇಂಫಾಲ್‌ನಲ್ಲಿ ಏರ್ಪಟ್ಟ ಸಭೆ, ಮಣಿಪುರದ ಅತಿ ದೊಡ್ಡ ರಾಜಕೀಯ ಸಭೆಯಾಗಿತ್ತು. ಮಣಿಪುರದಲ್ಲಿ ಭಾಜಪ ಸಂಘಟನೆ ಅಷ್ಟು ಬಲವಾಗಿಲ್ಲ. ಆದರೂ ಸಹ, ಅಷ್ಟು ಭಾರಿ ಸಂಖ್ಯೆಯಲ್ಲಿ ಜನರು ಸಂಗ್ರಹವಾಗಿದ್ದು ನೋಡಿದಾಗ, ದೇಶದ ಮನಸ್ಥಿತಿಯನ್ನು ಮನಗಾಣಬಹುದು. ಗೋಹಾಟಿ, ಚೆನ್ನೈ ಮತ್ತು ಅಂತಿಮವಾಗಿ ಕೇರಳದಲ್ಲಿ ಅವರು ಭಾರಿ ಜನಸ್ತೋಮವನ್ನೇ ಆಕರ್ಷಿಸಿದ್ದರು. ಅವರ ಅನ್ಯ ಕಾರ್ಯಕ್ರಮಗಳು ಧರ್ಮ ಹಾಗೂ ಜಾತಿಗಳ ಬೇಧಗಳನ್ನು ತೊಡೆದುಹಾಕಿದ್ದವು. ಸಾಂಪ್ರದಾಯಿಕವಾಗಿ ಭಾಜಪಗೆ ಸಾಧಾರಣ ಬೆಂಬಲ ದೊರೆಯುವ ಸಮುದಾಯಗಳೂ ಸಹ ಅತಿ ಉತ್ಸಾಹದೊಂದಿಗೆ ಅವರನ್ನು ತಮ್ಮ ಕಾರ್ಯಕ್ರಮಕ್ಕೆ ಅಹ್ವಾನಿಸಿದ್ದವು. ಜನರು ಭಾರಿ ಸಂಖ್ಯೆಯಲ್ಲಿ ಸ್ಪಂದಿಸಿದ್ದರು.

ಕಾಂಗ್ರೆಸ್‌ಗೆ ಭ್ರಮನಿರಸನವಾಗಿದೆ. ಜನರಿಗೆ ಭರವಸೆ ಬೇಕಿದೆ. ಬಸವಳಿದ ಜನರ ಬಯಕೆ ಪೂರೈಸುವ ಭರವಸೆಯ ಸಂಕೇತ ಮೋದಿ ಆಗಿದ್ದಾರೆಯೇ? ಜನರಿಗೆ ಮೇರು ವ್ಯಕ್ತಿತ್ವದ, ಸ್ಫೂರ್ತಿದಾಯಕ ಹಾಗೂ ನಿರ್ಣಾಯಕ ಮನೋಭಾವವುಳ್ಳ ನಾಯಕರನ್ನು ಪಡೆಯುವ ಹೆಬ್ಬಯಕೆಯಿದೆ. ಪ್ರಾಮಾಣಿಕತೆಯ ಹೊಸ ಆಯಾಮ ರೂಪಿಸಬಲ್ಲ ವ್ಯಕ್ತಿಯ ಬಯಕೆಯಿದೆ. ಬೆಲೆ ಹೆಚ್ಚಳ, ನಿರುದ್ಯೋಗ ಮತ್ತು ಆರ್ಥಿಕ ವ್ಯವಸ್ಥೆಯ ಹಿಂಜರಿತ ತ್ರಾಸದಾಯಕವಾಗಿವೆ. ಆದ್ದರಿಂದಲೇ ಭಾಜಪ ಭದ್ರಕೋಟೆ ಎನಿಸಿಕೊಂಡ ಭಾರತದ ಉತ್ತರ, ಕೇಂದ್ರ ಹಾಗೂ ಪಶ್ಚಿಮ ಭಾಗದ ಪ್ರದೇಶಗಳಲ್ಲಿ ಮೋದಿ ಅವರಿಗೆ ಅಭೂತಪೂರ್ವ ಜನಬೆಂಬಲ ದೊರೆಯುವುದರಲ್ಲಿ ಅರ್ಥವಿದೆ. ಆದರೆ ಸಾಂಪ್ರದಾಯಿಕವಾಗಿ ಭಾಜಪ ಸಮರ್ಥನೆ ಸಾಧಾರಣವಾಗಿರುವ ಪ್ರದೇಶಗಳಲ್ಲೂ ಭಾರಿ ಜನಸ್ಪಂದನೆ ದೊರೆತರೆ ಅದರ ಅರ್ಥವೇನು? ಈಶಾನ್ಯ ಪ್ರಾಂತ್ಯಗಳು, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕೇರಳದಲ್ಲಿಯೂ ಮೋದಿಯವರ ಸಾರ್ವಜನಿಕ ಸಭೆಗಳಿಗೆ ಹಿಂದೆಂದು ಕಾಣದ ಜನಸ್ಪಂದನ ಹಾಗೂ ಜನಾಭಿಮಾನ ದೊರೆತಿದೆ. ಜನರಲ್ಲಿರುವ ಈ ಬದಲಾವಣೆ ಹೆಚ್ಚಿನ ಮಹತ್ವ ಹೊಂದಿದೆಯೇ?

ಸ್ವಾಭಾವಿಕವಾಗಿ ಅಷ್ಟು ಭಾರಿ ಸಂಖ್ಯೆಯಲ್ಲಿ ಜನರು ತಾವಾಗೆ ಪ್ರತ್ಯಕ್ಷವಾಗುವುದಿಲ್ಲ? ಬಲವಾದ ಒಳ ಸೆಳೆತವನ್ನು ಅದು ಸೂಚಿಸುತ್ತದೆ. ಒಂದೆಡೆ ಆಕ್ರೋಶ ಮತ್ತೊಂದೆಡೆ ಭರವಸೆಯಿಂದ ಪ್ರೋತ್ಸಾಹಗೊಂಡ ಸುಪ್ತ ಸೆಳೆತ ಕಾಣುತ್ತಿದೆ. ಬದಲಾಗದ ಪರಿಸ್ಥಿತಿಯಿಂದ ಜನರು ಆಕ್ರೋಶಗೊಂಡಿದ್ದಾರೆ. ಅವರಿಗೆ ಬದಲಾವಣೆಯ ಅಗತ್ಯವಿದೆ. ಮೋದಿ ಆ ಬದಲಾವಣೆಯ,

ಉಜ್ವಲ ಭವಿಷ್ಯದ ಆಶಾಕಿರಣ ಆಗಿದ್ದಾರೆ. ಮೋದಿ ಅವರಿಗೆ ದೊರೆತಿರುವ ಭಾರಿ ಜನಬೆಂಬಲವನ್ನು ಮನಗಳಾಗಿ ಪರಿವರ್ತಿಸುವ ಅಗತ್ಯವಿದೆ. ಇದು ಸಾಧ್ಯವಾದಲ್ಲಿ, ಸುಪ್ತ ಸೆಳೆತವು ಹೆಚ್ಚಿನ ಸ್ಥಾನಗಳನ್ನು ಗಳಿಸಲು ನೆರವಾಗಬಹುದು. ಈ ರಾಜ್ಯಗಳಲ್ಲಿ ಭಾಜಪಗೆ ದೊರೆಯುವ ಬೆಂಬಲಕ್ಕಿಂತಲೂ ಹೆಚ್ಚಾಗಿ ಸಮಾಜದ ವಿವಿಧ ವರ್ಗಗಳ ಬೆಂಬಲ ಹೆಚ್ಚಾಗಿದೆ. ಸಹಜವಾಗಿ ಆಶ್ಚರ್ಯಕರ ಫಲಿತಾಂಶ ದೊರೆಯಲಿದೆಯೇ ಎಂಬ ಜಿಜ್ಞಾಸೆ ಮೂಡುತ್ತದೆ.

*****